# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಅರವಿಂದ ಕುಮಾರ ಅರಳಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2412

ಉತ್ತರಿಸಬೇಕಾದ ದಿನಾಂಕ : 22-03-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕರೋನಾ -19 ಹಾಗೂ ಪ್ರವಾಹ, ಅತಿವೃಷ್ಠಿ, ಅನಾವೃಷ್ಟಿಯಿಂದ ರೈತರು ಬೆಳೆದ ಬೆಳೆ ಹಾಳಾಗಿರುವುದು ಹಾಗೂ ಸರಿಯಾದ ಬೆಲೆ ಸಿಗದೆ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ರೈತರಿಗೆ ಈ ಸಂದರ್ಭದಲ್ಲಿ ನಷ್ಟವನ್ನು ಭರಿಸುವ ಕಾರಣಕ್ಕಾಗಿ ಅವರಿಗೆ ಪರಿಹಾರ ಹಾಗೂ ಸಾಲ ಮನ್ನಾ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; | **ಕಂದಾಯ ಇಲಾಖೆಗೆ ಸಂಬಂಧಿಸಿದಂತೆ**<br>ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಗಳ ಪ್ರಕಾರ ಪ್ರಾಕೃತಿಕ ವಿಕೋಪದಿಂದಾಗಿ ಶೇ.33 ಕ್ಕಿಂತ ಹೆಚ್ಚಿನ ಬೆಳೆ ಹಾನಿಗೆ ತುತ್ತಾದ ಕೃಷಿಕರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸಿಮೀತಗೊಳಿಸಿ ಪ್ರತಿ ಹೆಕ್ಟೇರ್‌ಗೆ ಇನ್‌ಪುಟ್ ಸಬ್ಸಿಡಿಯನ್ನು ನೀಡಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡಂತೆ ಮಾರ್ಗಸೂಚಿಗಿಂತ ಹೆಚ್ಚಿನ ಮೊತ್ತ ಇನ್‌ಪುಟ್ ಸಬ್ಸಿಡಿಯನ್ನು ರಾಜ್ಯ ಸರ್ಕಾರದ ಅನುದಾನದಲ್ಲಿ ಭರಿಸಲಾಗಿದೆ. |

(ರೂ.ಗಳಲ್ಲಿ)

| ಬೆಳೆ ವಿಧ | ಮಾರ್ಗಸೂಚಿ ದರ | ಹೆಚ್ಚುವರಿ ಮೊತ್ತ | ಪರಿಷ್ಕೃತ ಮೊತ್ತ |
|---|---|---|---|
| ಮಳೆಯಾಶ್ರಿತ | 6,800 | 6,800 | 13,600 |
| ನೀರಾವರಿ | 13,500 | 11,500 | 25,000 |
| ಬಹುವಾರ್ಷಿಕ | 18,000 | 10,000 | 28,000 |

2021-22ನೇ ಸಾಲಿನಲ್ಲಿ ರಾಜ್ಯಾದ್ಯಂತ ಸಂಭವಿಸಿದ ಅತಿವೃಷ್ಟಿ / ಪ್ರವಾಹದಿಂದಾಗಿ ಬೆಳೆ ಹಾನಿಗೆ ತುತ್ತಾದ 18.49 ಲಕ್ಷ ರೈತರಿಗೆ ವಿಪತ್ತು ಪರಿಹಾರ ನಿಧಿಯಿಂದ ರೂ.2435.57 ಕೋಟಿ ಇನ್‌ಪುಟ್ ಸಬ್ಸಿಡಿಯನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ.

**ಕೃಷಿ ಇಲಾಖೆಗೆ ಸಂಬಂಧಿಸಿದಂತೆ**

2020-21ನೇ ಸಾಲಿನಲ್ಲಿ ಮುಸುಕಿನಜೋಳ ಬೆಳೆ ಬೆಳೆದು ಕೋವಿಡ್-19 ರ ಸಮಸ್ಯೆಯಿಂದ ಆರ್ಥಿಕ ಸಂಕಷ್ಟಕ್ಕೆ

| | | |
|---|---|---|
| | | ಒಳಗಾಗಿರುವ ರೈತರಿಗೆ ಒಂದು ಸಲಕ್ಕೆ ರೂ.5000/-ಗಳಂತೆ ನೇರ ನಗದು ವರ್ಗಾವಣೆ (ಡಿಬಿಟಿ) ಮುಖಾಂತರ ಆರ್ಥಿಕ ನೆರವು ನೀಡಲಾಗಿದೆ. ಸರ್ಕಾರವು ರೂ.400.00 ಲಕ್ಷಗಳನ್ನು ಮೀಸಲಿಟ್ಟು 8,13,019 ರೈತರಿಗೆ ರೂ.391.133 ಕೋಟಿಗಳ ಸಹಾಯಧನ ಪಾವತಿಸಲಾಗಿದೆ.<br><br>**ಕೃಷಿ ಮಾರಾಟ ಇಲಾಖೆಗೆ ಸಂಬಂಧಿಸಿದಂತೆ**<br><br>ಕೋವಿಡ್-19 ಸಂದರ್ಭದಲ್ಲಿ ಕೃಷಿ ಮಾರಾಟ ಇಲಾಖೆಗೆ ಸಂಬಂಧಿಸಿದಂತೆ, ರೈತರು ತಮ್ಮ ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಧಾರಣೆಯನ್ನು ಪಡೆಯುವಲ್ಲಿ ರಾಜ್ಯ ಸರ್ಕಾರವು ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ;<br>1. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಶೀಘ್ರ ಹಾಳಾಗುವ ಉತ್ಪನ್ನಗಳ ಮೇಲೆ ವಿಧಿಸಲಾಗುತ್ತಿದ್ದ ಬಳಕೆದಾರರ ಶುಲ್ಕವನ್ನು ದಿ:01/05/2020 ರಿಂದ ದಿ:31/05/2020ರ ಅವಧಿಯವರೆಗೆ ಮನ್ನಾ ಮಾಡಲಾಗಿದೆ.<br>2. ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮತ್ತು ಕೇಂದ್ರ ಉಗ್ರಾಣ ನಿಗಮದ ಗೋದಾಮುಗಳನ್ನು ಮಾರುಕಟ್ಟೆ ಉಪ ಪ್ರಾಂಗಣವೆಂದು ಅಧಿಸೂಚನೆ ಮೂಲಕ ಘೋಷಿಸುವ ಮೂಲಕ ರೈತರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಪರ್ಯಾಯ ವೇದಿಕೆಯನ್ನು ಒದಗಿಸಲಾಗಿದೆ.<br>3. ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಇದ್ದ ನಿಬರ್ಂಧಗಳನ್ನು ತೆಗೆದುಹಾಕಲು ಮತ್ತು ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುವಂತೆ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಪೂರೈಕೆ ಸರಪಳಿಯನ್ನು ಹೆಚ್ಚಿಸಲಾಗಿದೆ.<br>4. ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಹೆಸರುಕಾಳು, ತೊಗರಿ, ಶೇಂಗಾ, ಕಡಲೆಕಾಳು, ಭತ್ತ, ರಾಗಿ, ಬಿಳಿಜೋಳ ಉತ್ಪನ್ನಗಳನ್ನು 5,81,896 ರೈತರಿಂದ 68,00,428 ಕ್ವಿಂಟಾಲ್ ಪ್ರಮಾಣದ ಉತ್ಪನ್ನಗಳನ್ನು ಖರೀದಿಸಲಾಗಿದೆ<br><br>**ಸಹಕಾರ ಸಂಘಗಳ ನಿಬಂಧಕರ ಕಛೇರಿಗೆ ಸಂಬಂಧಿಸಿದಂತೆ**<br><br>ಸಹಕಾರ ಸಂಘಗಳಲ್ಲಿ ರೈತರು ಪಡೆದ ಬೆಳೆ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಇ) | ಸಾಲ ಮನ್ನಾ ಮಾಡುವುದಾದರೆ ಯಾವ ಕಾಲಮಿತಿಯಲ್ಲಿ ಮಾಡಲಾಗುವುದು; ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು; | ಸಾಲ ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

| | | |
|---|---|---|
| ಈ) | ಕರೋನಾ, ಪ್ರವಾಹ, ಅತಿವೃಷ್ಠಿ, ಅನಾವೃಷ್ಟಿ ಮತ್ತು ಬೆಳೆ ಹಾನಿ ಸಂದರ್ಭದಲ್ಲಿ ಸಹಕಾರ ಇಲಾಖೆಯಲ್ಲಿ ಎಷ್ಟು ರೈತರು ಸಾಲ ಪಡೆದಿದ್ದಾರೆ? (ಜಿಲ್ಲಾವಾರು ವಿವರ ನೀಡುವುದು) | ಕೋವಿಡ್, ಪ್ರವಾಹ, ಅತಿವೃಷ್ಠಿ, ಅನಾವೃಷ್ಟಿ ಮತ್ತು ಬೆಳೆ ಹಾನಿ ಅವಧಿಯಲ್ಲಿ ಸಹಕಾರ ಸಂಘಗಳ ಮೂಲಕ 14.95 ಲಕ್ಷ ರೈತರು ಬೆಳೆ ಸಾಲ ಪಡೆದು ದಿ.28-2-2022 ಕ್ಕೆ ಹೊರಬಾಕಿ ಹೊಂದಿರುತ್ತಾರೆ. ಜಿಲ್ಲಾವಾರು ವಿವರ **ಅನುಬಂಧದಲ್ಲಿ** ನೀಡಲಾಗಿದೆ. |

**ಸಂಖ್ಯೆ ಸಿಒ 124 ಸಿಎಲ್‌ಎಸ್ 2022**

**(ಎಸ್. ಟಿ. ಸೋಮಶೇಖರ್)**
**ಸಹಕಾರ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದಕುಮಾರ್ ಅರಳಿ (ವಿಧಾನಸಭೆಯಿಂದಚುನಾಯಿತರಾದವರು)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2412 ಗೆ ಅನುಬಂಧ

**ಕೋವಿಡ್, ಪ್ರವಾಹ, ಅತಿವೃಷ್ಟಿ, ಅನಾವೃಷ್ಟಿ ಮತ್ತು ಬೆಳೆ ಹಾನಿ ಅವಧಿಯಲ್ಲಿ ಸಹಕಾರ ಸಹಕಾರ ಸಂಘಗಳ ಮೂಲಕ ಬೆಳೆ ಸಾಲ ಪಡೆದ ರೈತರ ವಿವರ**

| ಕ್ರ ಸಂ. | ಜಿಲ್ಲೆಯ ಹೆಸರು | ರೈತರ ಸಂಖ್ಯೆ |
|---|---|---|
| 1 | ಬೆಳಗಾವಿ | 456254 |
| 2 | ವಿಜಯಪುರ | 204141 |
| 3 | ಬಾಗಲಕೋಟೆ | 191458 |
| 4 | ಧಾರವಾಡ | 25079 |
| 5 | ಗದಗ | 26650 |
| 6 | ಹಾವೇರಿ | 38669 |
| 7 | ಉತ್ತರ ಕನ್ನಡ | 94918 |
| 8 | ಮೈಸೂರು | 130 |
| 9 | ಚಾಮರಾಜನಗರ | 65 |
| 10 | ಮಂಡ್ಯ | 385 |
| 11 | ಹಾಸನ | 454 |
| 12 | ಚಿಕ್ಕಮಗಳೂರು | 334 |
| 13 | ಕೊಡಗು | 127 |
| 14 | ದಕ್ಷಿಣ ಕನ್ನಡ | 755 |
| 15 | ಉಡುಪಿ | 197 |
| 16 | ಬೆಂಗಳೂರು ನಗರ | 8604 |
| 17 | ಬೆಂಗಳೂರು ಗ್ರಾಮಾಂತರ | 22180 |
| 18 | ರಾಮನಗರ | 48058 |
| 19 | ಕೋಲಾರ | 22251 |
| 20 | ಚಿಕ್ಕಬಳ್ಳಾಪುರ | 31424 |
| 21 | ತುಮಕೂರು | 326 |
| 22 | ಚಿತ್ರದುರ್ಗ | 2836 |
| 23 | ದಾವಣಗೆರೆ | 424 |
| 24 | ಶಿವಮೊಗ್ಗ | 1159 |
| 25 | ಬಳ್ಳಾರಿ | 103213 |
| 26 | ಬೀದರ | 79995 |
| 27 | ಕಲಬುರಗಿ | 83453 |
| 28 | ಯಾದಗಿರ | 27170 |
| 29 | ರಾಯಚೂರು | 18597 |
| 30 | ಕೊಪ್ಪಳ | 6030 |
| | ಒಟ್ಟು | 14,95,336 |